(19) ಸಹಕಾರಿಯಾದ ಉಪಕರಣಗಳು, ಉದಾಹರಣೆಗೆ, ಮಾತನಾಡುವ ಕ್ಯಾಲ್ಕ್ಯುಲೇಟರ್ (ಪರೀಕ್ಷೆಗಳಲ್ಲಿ ಕ್ಯಾಲ್ಕ್ಯುಲೇಟರ್‌ಗಳನ್ನು ಅನುಮತಿಸುವ ಸಂದರ್ಭಗಳಲ್ಲಿ), ಟೈಲರ್ ಫ್ರೇಮ್ (tailor frame), ಬ್ರೈಲ್ ಸ್ಲೇಟ್ (Braille slate), ಅಬಾಕಸ್, ಜಾಮಿಟ್ರಿ ಕಿಟ್, ಬ್ರೈಲ್ ಅಳತೆ ಟೇಪ್ (Braille measuring tape) ಹಾಗೂ ಕಮ್ಯುನಿಕೇಷನ್ ಚಾರ್ಟ್ (communication chart) ಮತ್ತು ಎಲೆಕ್ಟ್ರಾನಿಕ್ ಉಪಕರಣಗಳಂತಹ ವರ್ಧಕ ಸಂವಹನ ಉಪಕರಣಗಳನ್ನು (augmentative communication devices) ಅಭ್ಯರ್ಥಿಗಳು ಉಪಯೋಗಿಸಲು ಅವಕಾಶ ನೀಡಬೇಕು;

(20) 2016ರ ಅಧಿನಿಯಮ ಮತ್ತು ಅದರ ಅವಕಾಶಗಳ ಅನ್ವಯ ರಚಿಸಲಾದ ನಿಯಮಗಳ ಅಡಿಯಲ್ಲಿ ದೇಶದ ಯಾವುದೇ ಭಾಗದಲ್ಲಿನ ಪ್ರಮಾಣೀಕರಿಸುವ ಪ್ರಾಧಿಕಾರವು ನೀಡುವ ಅಂಗವಿಕಲತೆ ಪ್ರಮಾಣ ಪತ್ರವನ್ನು ಅದರ ನೈಜತೆ ದೃಢೀಕರಿಸಿಕೊಂಡು ಅಂಗೀಕರಿಸಬೇಕು.”

5. ಎದ್ದುಕಾಣುವ ಅಂಗವಿಕಲತೆಯುಳ್ಳ ವ್ಯಕ್ತಿಗಳಿಗೆ ನೇಮಕಾತಿ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಮೇಲಿನ ಮಾರ್ಗಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. ರಾಜ್ಯ ಸರ್ಕಾರದ ಯಾವುದೇ ಇಲಾಖೆಗಳು ಹಾಗೂ ಅವುಗಳ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ನಿಗಮ ಮತ್ತು ಮಂಡಳಿಗಳು ನೇಮಕಾತಿ ಕೈಗೊಳ್ಳುವ ಸಂದರ್ಭದಲ್ಲಿ ಹಾಗೂ ಎಲ್ಲಾ ಆಯ್ಕೆ ಪ್ರಾಧಿಕಾರಗಳು/ ಕರ್ನಾಟಕ ಲೋಕಸೇವಾ ಆಯೋಗ ಮೇಲ್ಕಂಡ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಉಮಾ ವರದಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1).

